ಶ್ರೀ ಜಗನ್ನಾಥ ದಾಸಾರ್ಯ ವಿರಚಿತ

## ॥ ಶ್ರೀ ವೇಂಕಟೇಶ ಸ್ತವರಾಜ ॥

ಶ್ರೀರಮಣ ಸರ್ವೇಶ ಸರ್ವದ ।
ಸಾರಭೋಕ್ತ ಸ್ವತಂತ್ರ ಸರ್ವದ ।
ಪಾರಮಹಿಮೋಧ್ಧಾರ ಸದ್ಗುಣ ಪೂರ್ಣ ಗಂಭೀರ ।
ಸಾರಿದವರಘದೂರಗೈಸಿ ಸೂರಿಜನರಿಗೆ ಸೌಖ್ಯ ನೀಡುವ ।
ಧೀರವೇಂಕಟರಮಣ ಕರುಣದಿ ಪೂರೆಯೋ ನೀ ಎನ್ನ ॥ ೧ ॥

ಘನ್ನಮಹಿಮಾಪನ್ನಪಾಲಕ ।
ನಿನ್ನಹೊರತಿನ್ನನ್ಯದೇವರ ।
ಮನ್ನದಲಿನಾನೆನೆಸೆನೆಂದಿಗು ಬನ್ನಪಡಿಸದಿರು ।
ಎನ್ನಪಾಲಕ ನೀನೆ ಇರುತಿರೆ ಇನ್ನು ಭವ ಭಯವೇಕೆ ಎನಗೆ ।
ಚನ್ನ ವೇಂಕಟರಮಣ ಕರುಣದಿ ಪೊರೆಯೋ ನೀ ಎನ್ನ ॥ ೨ ॥

ಯಾಕೆ ಪುಟ್ಟದು ಕರುಣ ಎನ್ನೊಳು ।
ಸಾಕಲಾರೆಯ ನಿನ್ನ ಶರಣನ ।
ನೂಕಿಬಿಟ್ಟರೆ ನಿನಗೆ ಲೋಕದಿ ಖ್ಯಾತಿ ಬಪ್ಪುವುದೇ ।
ನೋಕನೀಯಕ ನೀನೆ ಎನ್ನನು ।
ಜೋಕೆಯಿಂದಲಿ ಕಾಯೋ ಬಿಡದೆ ।
ಏಕದೇವನು ನೀನೆ ವೇಂಕಟ ಶೇಷಗಿರಿವಾಸ ॥ ೩ ॥

ಅಂಬುಜಾಂಬಕ ನಿನ್ನ ಪದಯುಗ ।
ನಂಬಿಕೊಂಡ ಈ ಪರಿಯಲಿರುತಿರೆ ।
ಡೊಂಬೆಗಾರನ ತೆರದಿ ನೀ ನಿರ್ಭಾಗ್ಯ ಸ್ಥಿತಿ ತೋರೆ ।
ಬಿಂಬ ಮೂರುತಿ ನಿನ್ನ ಕರಗತ ।
ಕಂಬುವರವೇ ಗತಿಯೋ ವಿಶ್ವಕುಟುಂಬಿ ।
ಎನ್ನನು ಸಲಹೋ ಸಂತತ ಶೇಷಗಿರಿವಾಸ ॥ ೪ ॥

ಹಿಂದೆ ನೀ ಪ್ರಹ್ಲಾದಗೋಸುಗ ।
ಎಂದು ನೋಡದ ರೂಪ ಧರಿಸಿ ।

ಬಂದು ದೈತ್ಯನ ಒಡಲ ಬಗೆದೆ ।
ಬಾಲಕನು ತಂದೆತಾಯ್ಗಳ ಬಿಟ್ಟು ವಿಪಿನದಿ ।
ನಿಂದು ತಪಿಸುವ ಪಂಚಮತ್ಸರ ।
ಕಂದನಾಧ್ರುವನಿಗೋಲಿದು ಪೊರೆದೆಯೊ ಶೇಷಗಿರಿವಾಸ ॥ ೫ ॥

ಪಿಂತು ಮಾಡಿದ ಮಹಿಮೆಗಳ ನಾ–
ನೆಂತು ವರ್ಣಿಸಲೇನು ಫಲ ಶ್ರೀ–
ಕಾಂತ ಎನ್ನನು ಪೊರೆಯೆ ಕೀರುತಿ ನಿನಗೆ ಫಲವೇನೊ ।
ಕಂತು ಜನಕನೆ ಎನ್ನ ಮನಸಿನ ।
ಅಂತರಂಗದಿ ನೀನೆ ಸರ್ವದ ।
ನಿಂತು ಪ್ರೇರಣೆ ಮಾಳ್ಪೆ ಸರ್ವದ ಶೇಷಗಿರಿವಾಸ ॥ ೬ ॥

ಶ್ರೀನಿವಾಸನೆ ಭಕ್ತಪೋಷನೆ ।
ಜ್ಞಾನಿಕುಲಗಳಿಗಭಯದಾಯಕ ।
ಧೀನಬಾಂದವ ನೀನೆ ಎನ್ನ ಮನದರ್ಥ ಪೂರೈಸೋ ।
ಅನುಪವೋಪಮಜ್ಞಾನ ಸಂಪದ ।
ವಿನಯಪೂರ್ವಕವಿತ್ತು ಪಾಲಿಸೊ ।
ಜನುಮಜನುಮಕೆ ಮರೆಯ ಬೇಡವೋ ಶೇಷಗಿರಿವಾಸ ॥ ೭ ॥

ಮದವು ಮತ್ಸರ ಲೋಭ ಮೋಹವು ।
ಒದಗಬಾರದು ಎನ್ನ ಮನದಲಿ ।
ಪದುಮನಾಭನೆ ಜ್ಞಾನ ಭಕ್ತಿವಿರಕ್ತಿ ನೀನಿತ್ತು ।
ಹೃದಯಮಧ್ಯದಿ ನಿನ್ನ ರೂಪವು ।
ವದನದಲಿ ತವ ನಾಮಮಂತ್ರವು ।
ಸದಯ ಪಾಲಿಸು ಬೇಡಿಕೊಂಬೇನು ಶೇಷಗಿರಿವಾಸ ॥ ೮ ॥

ಅಂದನುಡಿ ಪುಸಿಯಾಗಬಾರದು ।
ಬಂದ ಭಾಗ್ಯವು ಪೋಗಬಾರದು ।
ಕುಂದುಬಾರದೆ ನಿನ್ನ ಕರುಣವು ದಿನದಿ ವರ್ಧಿಸಲಿ ।
ನಿಂದೆ ಮಾಡುವ ಜನರ ಸಂಗವು ।
ಎಂದಿಗಾದರು ದೊರೆಯಬಾರದು ।
ಎಂದು ನಿನ್ನನು ಬೇಡಿಕೊಂಬೆನೊ ಶೇಷಗಿರಿವಾಸ ॥ ೯ ॥

ಏನು ಬೇಡಲಿ ಎನ್ನ ದೇವನೇ ।
ಸಾನುರಾಗದಿ ಎನ್ನ ಪಾಲಿಸೊ ।
ನಾನಾ ವಿಧವಿಧ ಸೌಖ್ಯನಿಡುವುದಿಹಪರಂಗಳಲಿ ।
ಶ್ರೀನಿವಾಸನೆ ನಿನ್ನ ದಾಸಗೆ ।
ಏನು ಕೊರೆತಿಲೆಲ್ಲಿ ನೋಡಲು ।
ನೀನೆ ನಿಂತೀವಿದದಿ ಪೇಳಿಸು ಶೇಷಗಿರಿವಾಸ ॥ ೧೦ ॥

ಆರು ಮನಿದವರೇನು ಮಾಳ್ಪರೊ ।
ಆರುವೊಲಿದವರೇನು ಮಾಳ್ಪರೊ ।
ಆರುನೇಹಿಗರಾರು ದ್ವೇಷಿಗಳಾರುದಾಶಿನರು ।
ಕ್ರೂರ ಜೀವರಹಣಿದು ಸಾತ್ವಿಕ ।
ಧೀರ ಜೀವರ ಪೊರೆದು ನಿನ್ನಲಿ ।
ಸಾರ ಭಕುತಿಯನಿತ್ತು ಪಾಲಿಸೋ ಶೇಷಗಿರಿವಾಸ ॥ ೧೧ ॥

ನಿನ್ನ ಸೇವೆಯನಿತ್ತು ಎನಗೆ ।
ನಿನ್ನ ಪದಯುಗಭಕ್ತಿ ನೀಡಿ ।
ನಿನ್ನ ಗುಣಗಣ ಸ್ತವನ ಮಾಡುವ ಜ್ಞಾನ ನೀನಿತ್ತು ।
ಎನ್ನ ಮನದಲಿ ನೀನೆ ನಿಂತು ।
ಘನ್ನಕಾರ್ಯವ ಮಾಡಿ ಮಾಡಿಸು ।
ಧನ್ಯನೆಂದೆನಿಸೆನ್ನ ಲೋಕದಿ ಶೇಷಗಿರಿವಾಸ ॥ ೧೨ ॥

ಜಯ ಜಯತು ಶಠ ಕೂರ್ಮರೂಪನೆ ।
ಜಯ ಜಯತು ಕಿಟ ಸಿಂಹ ವಾಮನ ।
ಜಯ ಜಯತು ಭೃಗುರಾಮ ರಘುಕುಲಸೋಮ ಶ್ರೀರಾಮ ।
ಜಯ ಜಯತು ಸಿರಿ ಯದುವರೇಣ್ಯನೆ ।
ಜಯ ಜಯತು ಜನಮೋಹ ಬುದ್ದನೆ ।
ಜಯ ಜಯತು ಕಲಿಕಲ್ಮಷಘ್ನನೆ ಕಲ್ಕಿನಾಮಕನೆ ॥ ೧೩ ॥

ಕರುಣಸಾಗರ ನೀನೆ ನಿಜಪದ ।
ಶರಣವತ್ಸಲ ನೀನೆ ಶಾಶ್ವತ ।
ಶರಣ ಜನಮಂದಾರ ಕಮಲ ಕಾಂತ ಜಯವಂತ ।
ನಿರುತ ನಿನ್ನನು ನುತಿಸಿ ಪಾಡುವೆ ।

ವರದ ಗುರು ಜಗನ್ನಾಥವಿಠ್ಠಲ ।
ಪರಮ ಪ್ರೇಮದಿ ಪೊರೆಯೊ ಎನ್ನನು ಶೇಷಗಿರಿವಾಸ ॥ ೧೪ ॥

॥ ಶ್ರೀಕೃಷ್ಣಾರ್ಪಣಮಸ್ತು ॥